ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 21–08–2021

## ಮಾಧ್ಯಮ ಆಹ್ವಾನ
## Media Invitation

**ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನದ ಉದ್ಘಾಟನಾ ಸಮಾರಂಭ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ ರೂಪಿಸಿದ ರೂವಾರಿಗಳಿಗೆ ಸನ್ಮಾನ:**

**ಸನ್ಮಾನ:**
**ಬಸವರಾಜ ಎಸ್. ಬೊಮ್ಮಾಯಿ,**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಉದ್ಘಾಟನೆ:**
**ಧರ್ಮೇಂದ್ರ ಪ್ರಧಾನ್**
ಮಾನ್ಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಕೇಂದ್ರ ಸಚಿವರು, ಭಾರತ ಸರ್ಕಾರ.

**ಘನ ಉಪಸ್ಥಿತಿ:**
ಡಾ. ಸಿ.ಎನ್. ಅಶ್ವಥ್ ನಾರಾಯಣ್
ಮಾನ್ಯ ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಸಚಿವರು

ಬಿ.ಸಿ.ನಾಗೇಶ್
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

**ಅಧ್ಯಕ್ಷತೆ:**
ರಿಜ್ವಾನ್ ಅರ್ಷದ್,
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ.

ದಿನಾಂಕ: 23–08–2021, ಸೋಮವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

**PRESS RELEASE**

## ಟೋಕಿಯೋ ಒಲಂಪಿಕ್ಸ್–2020: ರಾಜ್ಯದ ಕ್ರೀಡಾಪಟುಗಳು ಕ್ರೀಡಾ ತರಬೇತುದಾರರಿಗೆ ತಲಾ ರೂ.1ಲಕ್ಷ ಪ್ರೋತ್ಸಾಹ ಧನ ಘೋಷಣೆ

ಬೆಂಗಳೂರು ಆಗಸ್ಟ್ 21 (ಕರ್ನಾಟಕ ವಾರ್ತೆ) :

ಗೌರವಾನ್ವಿತ ಕರ್ನಾಟಕ ರಾಜ್ಯಪಾಲರು, ಟೋಕಿಯೋ ಒಲಂಪಿಕ್ಸ್–2020ರ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಂತಹ ಕರ್ನಾಟಕ ರಾಜ್ಯದ ಮೂರು ಕ್ರೀಡಾಪಟುಗಳು ಹಾಗೂ ಒಬ್ಬ ಕ್ರೀಡಾ ತರಬೇತುದಾರರಿಗೆ ತಲಾ ರೂ. 1.00 ಲಕ್ಷಗಳ ಒಟ್ಟು 4 ಲಕ್ಷ ರೂಪಾಯಿಗಳ ಪ್ರೋತ್ಸಾಹ ಧನವನ್ನು ಘೋಷಿಸಿರುತ್ತಾರೆ.

ಕ್ರೀಡಾಪಟುಗಳಾದ ಅತಿಥಿ ಅಶೋಕ್ ಗಾಲ್ಫ್ ಕ್ರೀಡೆ (Golf ), ಫೌದಾ ಮಿರ್ಜಾ ಕುದುರೆ ಸವಾರಿ (Equestrain), ಶ್ರೀಹರಿ ನಟರಾಜ್ ಈಜು (Swimming), ಹಾಗೂ ಕ್ರೀಡಾ ತರಬೇತುದಾರ ಅಂಕಿತಾ ಸುರೇಶ್ ಮಹಿಳಾ ಹಾಕಿ (Hockey) ಇವರಿಗೆ ತಲಾ ರೂ. 1.00 ಲಕ್ಷಗಳ ಪ್ರೋತ್ಸಾಹ ಧನ ಘೋಷಿಸಲಾಗಿದೆ.

ಟೋಕಿಯೋ ಒಲಂಪಿಕ್ಸ್ –2020 ರ ಕ್ರೀಡಾಕೂಟದಲ್ಲಿ ಕರ್ನಾಟಕ ರಾಜ್ಯದ ಕ್ರೀಡಾಪಟುಗಳು ಮತ್ತು ಕ್ರೀಡಾ ತರಬೇತುದಾರರು ಭಾರತ ದೇಶವನ್ನು ಪ್ರತಿನಿಧಿಸಿರುವುದು ಕರ್ನಾಟಕದ ಜನತೆಗೆ ಹೆಮ್ಮೆಯ ಪ್ರತೀಕವಾಗಿದೆ. ಗೌರವಾನ್ವಿತ ರಾಜ್ಯಪಾಲರು ಕ್ರೀಡಾಪಟುಗಳು ಹಾಗೂ ಕ್ರೀಡಾ ತರಬೇತುದಾರರನ್ನು ಸದ್ಯದಲ್ಲೇ ರಾಜಭವನದಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ ಸನ್ಮಾನಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಬಿಎಂಟಿಸಿ ಬಸ್ಸುಗಳಲ್ಲಿ ಪ್ರಯಾಣಿಸಲು ಆಗಸ್ಟ್ 23 ರಿಂದ ಅವಕಾಶ

ಬೆಂಗಳೂರು ಆಗಸ್ಟ್ 21 (ಕರ್ನಾಟಕ ವಾರ್ತೆ) :

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 2021–22ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು 9 ರಿಂದ 12ನೇ ತರಗತಿಗಳು ಆಗಸ್ಟ್ 23 ರಿಂದ ಪ್ರಾರಂಭಿಸಲಾಗುತ್ತಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಅನುವಾಗುವಂತೆ 9ನೇ ತರಗತಿಯಿಂದ 12ನೇ (ದ್ವಿತೀಯ ಪಿಯುಸಿ) ತರಗತಿಯ ವಿದ್ಯಾರ್ಥಿಗಳು 2020–21ನೇ ಸಾಲಿನಲ್ಲಿ ವಿತರಣೆ ಮಾಡಿರುವ ಸ್ಮಾರ್ಟ್‌ಕಾರ್ಡ್ ವಿದ್ಯಾರ್ಥಿ ಪಾಸು ಅಥವಾ ಪ್ರಸಕ್ತ ಸಾಲಿನಲ್ಲಿ ಶಾಲಾ/ಕಾಲೇಜಿಗೆ ದಾಖಲಾಗಿರುವ ಶುಲ್ಕ ರಸೀದಿ ಅಥವಾ ಶಾಲಾ/ಕಾಲೇಜಿನ ಗುರುತಿನ ಚೀಟಿಯೊಂದಿಗೆ ಆಗಸ್ಟ್ 23 ರಿಂದ ಮುಂದಿನ ಆದೇಶದವರೆಗೂ ಸಂಸ್ಥೆಯ ಸಾಮಾನ್ಯ ಸಾರಿಗೆಗಳಲ್ಲಿ ವಿದ್ಯಾರ್ಥಿಗಳ ವಾಸಸ್ಥಳದಿಂದ ಶಾಲಾ/ಕಾಲೇಜಿನವರೆಗೆ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಾಣಿಗಳ ದತ್ತು ಸ್ವೀಕಾರ

ಬೆಂಗಳೂರು ಆಗಸ್ಟ್ 21 (ಕರ್ನಾಟಕ ವಾರ್ತೆ) :

ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯದ ಪ್ರಾಣಿಗಳ ದತ್ತು ಸ್ವೀಕಾರ ಯೋಜನೆಯಡಿ ಮೃಗಾಲಯದ ಪ್ರಾಣಿ ಪಕ್ಷಿಗಳನ್ನು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ "ಹಸಿರು ಆನೆಕೊಂಡ"ವನ್ನು ಮೈಸೂರಿನ ಕುಮಾರ್ ನಾಯಕ್, "ಲವ್ ಬರ್ಡ್"ನ್ನು ಮೈಸೂರಿನ ಪ್ರತೀಕ್ಷ ಎಸ್ ಮತ್ತು ಪವನ್‌ತೇಜ್, "ಗ್ರೇ ಗಿಳಿ" ಅನ್ನು ಮೈಸೂರಿನ ವೈಭವ ಆರ್.ಎಂ, "ಬ್ಲ್ಯಾಕ್ ಪ್ಯಾಂಥರ್ ಮತ್ತು ಇಂಡಿಯನ್ ಲೆಪರ್ಡ್"ನ್ನು ಬೆಳಗಾವಿಯ ಅನಿರುದ್ಧ ಬಸವರಾಜ ಪರಮಶೆಟ್ಟಿ, "ಬಿಳಿ ನವಿಲು" ಅನ್ನು ಬಳ್ಳಾರಿಯ ಮಂಜುನಾಥ ಬೆನಕ ಶೆಟ್ಟಿ ಅವರು ದತ್ತು ಪಡೆದಿರುವುದಕ್ಕೆ ಶ್ರೀಚಾಮರಾಜೇಂದ್ರ ಮೃಗಾಲಯ, ಮೈಸೂರು ಅಭಿನಂದನೆಗಳನ್ನು ಸಲ್ಲಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಆಗಸ್ಟ್ 25 ರಿಂದ ದೂರಶಿಕ್ಷಣದ ಸ್ನಾತಕೋತ್ತರ ಪದವಿಯ ಪ್ರವೇಶಾತಿ ಆರಂಭ

ಬೆಂಗಳೂರು ಆಗಸ್ಟ್ 21 (ಕರ್ನಾಟಕ ವಾರ್ತೆ) :

ಬೆಂಗಳೂರು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯವು 2020-21 ನೇ ಸಾಲಿನ ದ್ವಿತೀಯ ಮತ್ತು ತೃತೀಯ ಸ್ನಾತಕ ಹಾಗೂ ದ್ವಿತೀಯ ಸ್ನಾತಕೋತ್ತರ ಪದವಿಗಳಿಗೆ ಆಗಸ್ಟ್ 25 ರಿಂದ ಪ್ರವೇಶಾತಿಗಳನ್ನು ಪ್ರಾರಂಭಗೊಳಿಸಲಾಗುತ್ತಿದೆ.

ವಿದ್ಯಾರ್ಥಿಗಳು ಅರ್ಜಿ ಫಾರಂಗಳನ್ನು ವಿತರಿಸುವ ಕೊನೆಯ ದಿನಾಂಕ ಆಗಸ್ಟ್ 25 ರಿಂದ ಸೆಪ್ಟೆಂಬರ್ 30 ರವರೆಗೆ ಹಾಗೂ ಅರ್ಜಿ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ (ರೂ. 200/-ದಂಡ ಶುಲ್ಕದೊಂದಿಗೆ) ಅಕ್ಟೋಬರ್ 1 ರಿಂದ ಅಕ್ಟೋಬರ್ 30ರವರೆಗೆ, ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸಲು ನವೆಂಬರ್ 15 ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿ ಶುಲ್ಕ ಹಾಗೂ ಪ್ರವೇಶಾತಿ ಶುಲ್ಕವನ್ನು ವಿಶ್ವವಿದ್ಯಾಲಯ ವೆಬ್‌ಸೈಟ್ ವಿಳಾಸ: www.bangaloreuniversity.ac.in ಮೂಲಕ ಪಾವತಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿಗಳನ್ನು ಅಂತರ್ಜಾಲ ವೆಬ್‌ಸೈಟ್ www.dccbub.in ನಿಂದ ಪಡೆಯಬಹುದು ಹಾಗೂ ದೂರವಾಣಿ ಸಂಖ್ಯೆಗಳು: 080-22961264, 22961265, ಕಛೇರಿ ವಿಳಾಸ: ದೂರ ಶಿಕ್ಷಣ ನಿರ್ದೇಶನಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056 ನ್ನು ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪದವಿ ಕೋರ್ಸುಗಳ ಪ್ರವೇಶಾತಿ ಆರಂಭ

ಬೆಂಗಳೂರು ಆಗಸ್ಟ್ 21 (ಕರ್ನಾಟಕ ವಾರ್ತೆ) :

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವು 2021-22ರ ಸಾಲಿನ ಶೈಕ್ಷಣಿಕ ವರ್ಷದ ಪದವಿ ಕೋರ್ಸುಗಳಾದ ಬಿ.ಎ, ಬಿಕಾಂ, ಬಿಬಿಎ, ಬಿಎಸ್ಸಿ, ಬಿಸಿಎ, ಬಿಎಸ್ಸಿ-ಫ್ಯಾಡ್, ಬಿಎಸ್ಸಿ-ಗೃಹ ವಿಜ್ಞಾನ ಕೋರ್ಸುಗಳ ಪ್ರವೇಶಾತಿ ಆರಂಭವಾಗಿದೆ. ಎಲ್ಲಾ ಪದವಿ ಕೋರ್ಸುಗಳು ನವೀನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ನಡೆಯಲಿದ್ದು, ಆಗಸ್ಟ್ 23 ರಿಂದ ಪ್ರವೇಶ ಪಡೆಯಬಹುದಾಗಿದೆ.

ಬ್ಯಾಚುಲರ್ ಆಫ್ ಟ್ರಾವೆಲ್ ಅಂಡ್ ಟೂರಿಸಂ ಮ್ಯಾನೇಜ್‌ಮೆಂಟ್ (ಬಿ.ಟಿ.ಟಿ.ಎಂ), ಬ್ಯಾಚುಲರ್ ಆಫ್ ಸೋಶಿಯಲ್ ವರ್ಕ್ (ಬಿ.ಎಸ್.ಡಬ್ಲ್ಯೂ), ಬಿಎಸ್ಸಿ- ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಮಷೀನ್ ಲರ್ನಿಂಗ್ ( ಬಿಎಸ್ಸಿ- ಎಐ & ಎಂಎಲ್), ಬಿಎಸ್ಸಿ- ಡೇಟಾ ಸೈನ್ಸ್ ಅಂಡ್ ಅನಲಿಟಿಕ್ಸ್ (ಎಸ್ಸಿ- ಡಿಎಸ್ & ಎ), ಮತ್ತು ಬಿ.ಕಾಮ್ (ಬಿಸಿನೆಸ್ ಅನಲಿಟಿಕ್ಸ್) Self Finance ಕೋರ್ಸುಗಳಿಗೆ ಪ್ರವೇಶಾತಿಯನ್ನು ಪ್ರಾರಂಭಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು: 9481061413, 9448160422, 8618345726, 9900744866, 9880756346 ನ್ನು ಸಂಪರ್ಕಿಸಬಹುದು ಹಾಗೂ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಅರಮನೆ ರಸ್ತೆ, ಬೆಂಗಳೂರು-560001, ನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವಾಯು ಗುಣಮಟ್ಟ ಸೂಚ್ಯಂಕ

ಬೆಂಗಳೂರು, ಆಗಸ್ಟ್ 21 (ಕರ್ನಾಟಕ ವಾರ್ತೆ):

**ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 21.8.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 48 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 47 | ಉತ್ತಮ | $PM_{10}$ |
| 3 | ಕವಿಕ, ಮೈಸೂರುರಸ್ತೆ | 69 | ತೃಪ್ತಿಕರ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 46 | ಉತ್ತಮ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 77 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 59 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 51 | ತೃಪ್ತಿಕರ | $PM_{10}$ |
| **(21.8.2021 at 11.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 64 | ತೃಪ್ತಿಕರ | $PM_{10}$ |
| 9 | ಪೀಣ್ಯ | 66 | ತೃಪ್ತಿಕರ | $PM_{10}$ |
| 10 | ಬಿಟಿಎಂ ಲೇಔಟ್ | 59 | ತೃಪ್ತಿಕರ | $PM_{10}$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| ಉತ್ತಮ (0–50) | ಕನಿಷ್ಠ ಪರಿಣಾಮ |
| ತೃಪ್ತಿಕರ (51–100) | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| ಸಾಧಾರಣ (101–200) | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| ಕಳಪೆ (201–300) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| ಅತಿ ಕಳಪೆ (301–400) | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| ತೀವ್ರ (>401) | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 21.8.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 48 | Good | $PM_{10}$ |
| 2 | Jayanagar 5th Block, Shalini ground | 47 | Good | $PM_{10}$ |

| | | | | |
|---|---|---|---|---|
| 3 | KAVIKA, Mysore Road | 69 | Satisfactory | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 46 | Good | $PM_{10}$ |
| 5 | HSR Layout, near Central Silkboard | 77 | Satisfactory | $PM_{10}$ |
| 6 | City Railway Station, Magestic, Bengaluru | 59 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 51 | Satisfactory | $PM_{10}$ |
| **(21.8.2021 at 11.05 AM)** | | | | |
| 8 | BWSSB, Kadabesanahalli | 64 | Satisfactory | $PM_{10}$ |
| 9 | Peenya | 66 | Satisfactory | $PM_{10}$ |
| 10 | BTM Layout | 59 | Satisfactory | $PM_{10}$ |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |